ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ಕಾರ್ಯಾಲಯ ನಾಡಕಛೇರಿ ಗುಡೇಕೋಟೆ

ಸಂ/ಕಂ/ಹ.ಬ./ನಾಕಗು/05/2016-17. ದಿನಾಂಕ:16-09-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಸಣ್ಣ ಸೂರಯ್ಯ ತಂದೆ ಲೇಟ್ ಕವಿ ಪಾಪಯ್ಯ<br>2)ಕರೇಪಾಪಯ್ಯ ತಂದೆ ಲೇಟ್ ಕವಿ ಪಾಪಯ್ಯ<br>3)ಸೂರೇ ಪಾಪಯ್ಯ ತಂದೆ ಲೇಟ್ ಕವಿ ಪಾಪಯ್ಯ<br>4)ಕವಿ ಈರಣ್ಣ ತಂದೆ ಲೇಟ್ ಕವಿ ಪಾಲಯ್ಯ<br>5)ಕವಿ ಪಾಪಯ್ಯ ತಂದೆ ಲೇಟ್ ಕವಿ ಪಾಲಯ್ಯ<br>6)ಕವಿ ಚನ್ನಯ್ಯ ತಂದೆ ಲೇಟ್ ಕವಿ ಪಾಲಯ್ಯ<br>ಸಂಕ್ಲಾಪುರ ಗ್ರಾಮ ಕೂಡ್ಲಿಗಿ ತಾಲೂಕು | ಬೋರಯ್ಯ ತಂದೆ ಲೇಟ್ ಸೂರಯ್ಯ<br>ಸಂಕ್ಲಾಪುರ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಗಂಡಾಬೊಮ್ಮನಹಳ್ಳಿ ಗ್ರಾಮದ ಸನಂ 64/1ಎ. 64/1ಬಿ. 64/2. 65/1ಎ. 65/1ಬಿ. 65/3. ವಿಸ್ತೀರ್ಣ 1-82. 3-27. 5-08. 3-84. 5-00. 5-00. ಎಕ್ರೆ ಜಮೀನುಗಳನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಗಂಡಾಬೊಮ್ಮನಹಳ್ಳಿ ಗ್ರಾಮದ ಸನಂ 64/1ಎ. 64/1ಬಿ. 64/2. 65/1ಎ. 65/1ಬಿ. 65/3. ವಿಸ್ತೀರ್ಣ 1-82. 3-27. 5-08. 3-84. 5-00. 5-00. ಎಕ್ರೆ ಜಮೀನುಗಳನ್ನು ಸದರಿ ತಾಲೂಕು ಸಂಕ್ಲಾಪುರ ಗ್ರಾಮದ ಸಣ್ಣ ಸೂರಯ್ಯ ತಂದೆ ಲೇಟ್ ಕವಿ ಪಾಪಯ್ಯ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಗಂಡಾಬೊಮ್ಮನಹಳ್ಳಿ ಇವರು ನಮೂನೆ-21 ನೋಟಿಸನ್ನು ದಿನಾಂಕ 20-04-2016. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸರಿ ತಾಲೂಕು ಸಂಕ್ಲಾಪುರ ಗ್ರಾಮದ ಬೋರಯ್ಯ ತಂದೆ ಲೇಟ್ ಸೂರಯ್ಯ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 14/2015-16. ದಿನಾಂಕ 1-05-2016. ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 31-05-2016. ರಿಂದ 16-09-2016. ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಗೂ ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ಗಂಡಾಬೊಮ್ಮನಹಳ್ಳಿ ಗ್ರಾಮದ ಸನಂ 64/1ಎ. 64/1ಬಿ. 64/2. 65/1ಎ. 65/1ಬಿ. 65/3. ವಿಸ್ತೀರ್ಣ 1-82. 3-27. 5-08. 3-84. 5-00. 5-00. ಎಕ್ರೆ ಜಮೀನುಗಳ ಅರ್ಜಿದಾರರ ತಂದೆಯವರಾದ ಕವಿ ಪಾಪಯ್ಯ ಹಾಗೂ ಚಿಕ್ಕಪ್ಪನವರಾದ ಕವಿ ಪಾಲಯ್ಯ. ಇವರ ಹೆಸರಲ್ಲಿ ಜಂಟಿ ಪಟ್ಟಾ ಲೆಕ್ಕ ದಾಖಲೆ ಇರುತ್ತದೆ. ಕವಿ ಪಾಪಯ್ಯ ಇವರು ದಿನಾಂಕ 30-01-1959 ರಂದು ಹಾಗೂ ಇವರ ಇಬ್ಬರ ಹೆಂಡಂದಿರಾದ 01 ಬೋರಮ್ಮ ಇವರು

ಪು.ತಿ.ನೋ:-2.

ದಿನಾಂಕ 25-03-1995 ರಂದು ಹಾಗೂ ಇವರ ಎರಡನೇ ಹೆಂಡತಿ ಓಬಮ್ಮ ಇವರು ದಿನಾಂಕ 15-08-1999 ರಂದು ಹಾಗೂ ಅರ್ಜಿದಾರರ ಚಿಕ್ಕಪ್ಪನವರಾದ ಕವಿ ಪಾಲಯ್ಯ ಇವರು ದಿನಾಂಕ 01-08-1987 ರಂದು ಚಿಕ್ಕಮ್ಮಳಾದ ಲಕ್ಷ್ಮಮ್ಮ ಇವರು ದಿನಾಂಕ 03-03-1999 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನುಗಳು ನಮ್ಮ ಅಜ್ಜನ ಹೆಸರಿನಲ್ಲಿರುವ ಸ್ವತ್ತುಗಳಾಗಿರುತ್ತವೆ. ಹಾಗೂ ಸದರಿ ಜಮೀನುಗಳಲ್ಲಿ ನಮಗೆ ಪಾಲು ಇರುವುದರಿಂದ ಹಾಗೂ ಪಾಲು ಬರಬೇಕಾಗಿರುವುದರಿಂದ ಪೋತಿವಾರಸು ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನಮ್ಮ ತಕರಾರು ಇರುವುದಾಗಿ ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ಮತ್ತು ತಕರಾರುದಾರರ ಹೇಳಿಕೆಗಳನ್ನು ಕೇಳಿ ತಕರಾರುದಾರರು ತಮ್ಮ ಹಕ್ಕನ್ನು ಸಾಬೀತು ಪಡಿಸುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಅರ್ಜಿದಾರರು ಮತ್ತು ತಕರಾರುದಾರರು ಸಲ್ಲಿಸಿದ ದಾಖಲೆಗಳು ಮತ್ತು ಮಂಡಿಸಿದ ವಾದವನ್ನಾಧರಿಸಿ ವಿವಾದಿತ ಸ್ವತ್ತುಗಳನ್ನು ಪೋತಿವಿರಾಸತ್ ಆಧರಿಸಿ ಅರ್ಜಿದಾರರ ಕೋರಿಕೆಯನ್ವಯ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಗಂಡಾಬೊಮ್ಮನಹಳ್ಳಿ ಗ್ರಾಮದ ಸನಂ 64/1ಎ. 64/1ಬಿ. 64/2. 65/1ಎ. 65/1ಬಿ. 65/3. ವಿಸ್ತೀರ್ಣ 1-82. 3-27. 5-08. 3-84. 5-00. 5-00. ಎಕ್ರೆ ಜಮೀನುಗಳನ್ನು ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರಾದ ಸಣ್ಣ ಸೂರಯ್ಯ ತಂದೆ ಲೇಟ್ ಕವಿ ಪಾಪಯ್ಯ. ಕರೇ ಪಾಪಯ್ಯ ತಂದೆ ಲೇಟ್ ಕವಿ ಪಾಪಯ್ಯ ಸೂರೇ ಪಾಪಯ್ಯ ತಂದೆ ಲೇಟ್ ಕವಿ ಪಾಪಯ್ಯ ಕವಿ ಈರಣ್ಣ ತಂದೆ ಲೇಟ್ ಕವಿ ಪಾಲಯ್ಯ. ಕವಿ ಪಾಪಯ್ಯ ತಂದೆ ಲೇಟ್ ಕವಿ ಪಾಲಯ್ಯ. ಕವಿ ಚನ್ನಪ್ಪ ತಂದೆ ಲೇಟ್ ಕವಿ ಪಾಲಯ್ಯ. ಸಂಕ್ಲಾಪುರ ಗ್ರಾಮ ಇವರ ಹೆಸರುಗಳಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ. ಹಾಗೂ ತಕರಾರುದಾರರು ತಮ್ಮ ಹಕ್ಕಿಗಾಗಿ ಸಿವಿಲ್ ನ್ಯಾಯಾಲಯದ ಮೊರೆ ಹೋಗುವಂತೆಯು ಸಹಾ ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 16-09-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ, ಗುಡೇಕೋಟೆ.
ಗುಡೇಕೋಟೆ

ಪು.ತಿ.ನೋ:-3.

ಇದರ ಪ್ರತಿಯನ್ನು:

1) ಅರ್ಜಿದಾರರಾದ ಸಣ್ಣ ಸೂರಯ್ಯ ತಂದೆ ಲೇಟ್ ಕವಿ ಪಾಪಯ್ಯ. ಕವಿ ಈರಣ್ಣ ತಂದೆ ಲೇಟ್ ಕವಿ ಪಾಲಯ್ಯ. ಹಾಗೂ ಇತರರು ಸಂಕ್ಲಾಪುರ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಟಿ.ಪ್ರಕಾಶ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಬೋರಯ್ಯ ತಂದೆ ಲೇಟ್ ಸೂರಯ್ಯ ಸಂಕ್ಲಾಪುರ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.